ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ನ ಕಾರ್ಯ

265 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ ಕೆಲಸ ಮಾಡುತ್ತಿದೆಯೇ?*

ಆ) *ಇಲ್ಲದಿದ್ದಲ್ಲಿ 19-2-1991ರಲ್ಲಿ ಬೆಂಗಳೂರು ಮಹಾನಗರಪಾಲಿಕೆಯವರು ಹೊಸದಾಗಿ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ ತೆರೆಯಲು ನಿರ್ಧರಿಸಿರುವುದು ನಿಜವೇ?*

ಇ) *ಹೊಸದಾಗಿ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ಗಾಗಿ ಎಷ್ಟು ಜನ ಸಿಬ್ಬಂದಿಯನ್ನು ತೆಗೆದುಕೊಳ್ಳಲಾಗುವುದು?*

ಈ) *ಬೆಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಬರತಕ್ಕ ಜನತೆಗೆ ಅನುಕೂಲವಾಗಲು ಕೂಡಲೇ ಬೆಂಗಳೂರು ಮಹಾನಗರಪಾಲಿಕೆಯು ನಿರ್ಣಯ ಮಾಡಿರುವ ರೀತಿಯಲ್ಲಿ ಹೊಸದಾಗಿ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ ಅನ್ನು ತೆರೆಯಲು ಸರ್ಕಾರ ಅನುಮತಿ ನೀಡುವುದೇ?*

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) ಇಲ್ಲ

ಆ) ಹೌದು

ಇ) ಮತ್ತು ಈ) ಹೊಸದಾಗಿ ಸ್ಥಾಪಿಸಬೇಕೆಂದಿರುವ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ಗೆ ಬೇಕಾಗುವ ಸಿಬ್ಬಂದಿಯನ್ನು ಮಂಜೂರು ಮಾಡುವ ಬೆಂಗಳೂರು ಮಹಾನಗರಪಾಲಿಕೆಯ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಸ್ಯಾನಿಟರಿ ಇಂಜನೀಯರಿಂಗ್ ಸೆಲ್ ಕೆಲಸ ಮಾಡುತ್ತಿದೆಯೇ ಅಂದ್ರೆ 'ಇಲ್ಲ' ಎಂದು ಹೇಳಿದ್ದಾರೆ. ಇಂಜನೀಯರಿಂಗ್ ಸೆಲ್ ತೆರೆಯತಕ್ಕಂಥ ಉದ್ದೇಶ ಇದೆಯೇ ಅಂದ್ರೆ 'ಹೌದು' ಅಂತ ಹೇಳಿದ್ದಾರೆ ಮತ್ತು ಸಿಬ್ಬಂದಿ ಮಂಜೂರಾತಿ ಮಾಡತಕ್ಕಂಥಾದ್ದು ಸರ್ಕಾರದ ಪರಿಶೀಲನೆಯಲ್ಲಿದೆ ಅಂತ ಹೇಳಿದ್ದಾರೆ. ಇದರಿಂದ ಬೆಂಗಳೂರಿನಲ್ಲಿರತಕ್ಕಂಥ ಸ್ಯಾನಿಟರಿ ಸಿಸ್ಟಂ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ ಎನ್ನುವುದನ್ನು ನಾನು ಈ ಸಮಯದಲ್ಲಿ ಹೆಚ್ಚು ಹೇಳುವ ಅಗತ್ಯ ಇಲ್ಲ. ಎಲ್ಲಾ ಮ್ಯಾನ್-ಹೋಲ್ಗಳು, ಚರಂಡಿ ವ್ಯವಸ್ಥೆ ಬೆಂಗಳೂರು ನಗರದಲ್ಲಿ ಅವ್ಯವಸ್ಥೆಯ ಸ್ಥಾನಗಳು ಆಗಿವೆ. ಇದಕ್ಕೆ ಒಂದು ಸೆಲ್ ಓಪನ್ ಮಾಡಬೇಕೆಂದು ಹೇಳಿ 1991ನೇ ಇಸವಿಯಲ್ಲಿ ಬೆಂಗಳೂರು ನಗರ ಪಾಲಿಕೆಯವರು ಒಂದು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದರು ಇವತ್ತಿನವರೆಗೂ ಆ ಪ್ರಸ್ತಾವನೆ ಸರ್ಕಾರದ ಮತಿಯಿಂದ ಅಂಗೀಕಾರ ಆಗಲಿಲ್ಲ. ಸರ್ಕಾರಕ್ಕೆ ಇದರ ಬಗ್ಗೆ ಆಸಕ್ತಿ ಇದೆಯೋ ಇಲ್ಲವೋ ಎಂದು ನಾಗರೀಕರು ಯೋಚನೆ ಮಾಡುವ ಕಾಲ ಬಂದಿದೆ. ಇದು ಪರಿಶೀಲನೆಯಲ್ಲಿದೆ ಎನ್ನುವುದಕ್ಕೆ ಬದಲಾಗಿ ಸಚಿವರು ನಿರ್ದಿಷ್ಟವಾಗಿ ಇಂತಹ ತಾರೀಖಿನಲ್ಲಿ ಇದನ್ನು ಮಾಡುತ್ತೇವೆ ಇಂತಹ ದಿವಸ ಇದನ್ನು ಆರಂಭ ಮಾಡುತ್ತೇವೆ ಎನ್ನತಕ್ಕಂಥ ಸ್ಪಷ್ಟ ಉತ್ತರ ಈ ಸಭೆಗೆ ಕೊಡಬೇಕೆಂದು ನಾನು ಈ ಸಮಯದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೇ, ಅವರ ಮೂಲಭೂತವಾದ ಪ್ರಶ್ನೆ ಇರುವುದು ಸ್ಯಾನಿಟರಿ ಇಂಜಿನೀಯಹಿಂಗ್ ಸೆಲ್ ಅಂತ. ಅದು ಮಿಸ್ ಲೀಡಿಂಗ್ ಆಗಿದೆ. ಈ ಸೆಲ್ ಕ್ರಿಯೇಟ್ ಮಾಡಿರುವುದು ಒಂದು ಎರಡು ಸಾವಿರ

ಟನ್ ಕಸ ಕಡ್ಡಿ ತೆಗೆದು ಹೊರಗೆ ಹಾಕುವುದಕ್ಕೆ, ಆರೋಗ್ಯ ಇಲಾಖಾಧಿಕಾರಿಗಳು ಆರು ಸಾವಿರ ಪೌರ ಕಾರ್ಮಿಕರನ್ನು ಇಟ್ಟುಕೊಂಡು ಅದನ್ನು ತೆಗೆಯುತ್ತಿದ್ದಾರೆ. ಆ ಸೆಲ್ ಮಾಡಿದ ಉದ್ದೇಶ ಏನು ಅಂತ ಸರ್ಕಾರದ ಗಮನಕ್ಕೆ ಬಂದಿದೆ. ಒಂದು 9ಜನ ಇಂಜಿನೀಯರ್ಸ್ಗೆ ಕೆಲಸ ಕೊಡುವುದು. ಇಡೀ ಭಾರತದಲ್ಲಿ ಯಾವ ವಿಶ್ವವಿದ್ಯಾನಿಲಯದಲ್ಲೂ ಕೂಡ ಇಂಜನೀಯರ್ಸ್ಗೆ ಕಸ ಕಡ್ಡಿ ತೆಗೆಯುವುದು ಹೊರಗೆ ಹಾಕುವುದು ಈ ರೀತಿ ವಿದ್ಯೆ ಕಲಿಸಿಲ್ಲ. ಆದರೆ ಇವರು ರೆಜಲೂಶನ್ ಮಾಡಿ ಕಳುಹಿಸಿದ್ದಾರೆ. ಇದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ, ಇದನ್ನು ರಿಜೆಕ್ಟ್ ಮಾಡಿ ಕಳುಹಿಸುತ್ತೇವೆ. ಇನ್ನೊಂದು ಹೇಳಿದರು ಬೆಂಗಳೂರಿನಲ್ಲಿ ಮ್ಯಾನ್-ಹೋಲ್ಸ್ ಎಲ್ಲಾ ಕಟ್ಟಿ ಕೊಂಡಿದೆ ಹೋಲ್ಗಳು ಮತ್ತು ಸ್ಯಾನಿಟೇಶನ್ ಕೆಲಸವನ್ನು ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ನವರು ಮಾಡುತ್ತಿದ್ದಾರೆ? ಕಾರ್ಪೊರೇಷನ್ನಲ್ಲಿ ಆ ಕೆಲಸ ಮಾಡುತ್ತಿಲ್ಲ ಈ ಸ್ಯಾನಿಟರಿ ಇಂಜಿನೀಯರಿಂಗ ಸೆಲ್ ಕಾರ್ಪೋರೇಶನ್ಗೆ ಅವಶ್ಯಕತೆ ಇಲ್ಲ ಆದಷ್ಟು ಬೇಗ ಫೈಲ್ ಬಂದ ತಕ್ಷಣ ರಿಜೆಕ್ಟ್ ಮಾಡಿ ಕಳುಹಿಸುತ್ತಿದ್ದೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೇ ಎರಡೇ ಎರಡು ಪ್ರಶ್ನೆಗಳು ಇವೆ ನನಗೆ ಅವಕಾಶ ಮಾಡಿಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಬೆಳಗ್ಗೆಯಿಂದ ಕೇಳುತ್ತಿದ್ದಾರೆ, ಎರಡೇ ಎರಡು ಪ್ರಶ್ನೆಗಳು ಇವೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ನಾನು ಬೆಳಗ್ಗೆಯಿಂದ ಹೇಳುತ್ತಿದ್ದೇನೆ. ಒಂದೊಂದೂ ಪ್ರಶ್ನೆಗೆ 15-20 ನಿಮಿಷ ತೆಗೆದುಕೊಂಡರೆ ಹೇಗೆ? ತಾವೆಲ್ಲ ನನಗೆ ಸಹಕಾರ ಕೊಡಬೇಕು ಇಲ್ಲದಿದ್ದರೆ ಆಗುವುದಿಲ್ಲ.

ಸಿಂಧನೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

453 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯ ಮಂಜೂರಾಗಿದ್ದು ಆದು ಯಾವ ಹಂತದಲ್ಲಿದೆ?

ಆ) ಈ ಯೋಜನೆಗೆ ಮಂಜೂರಾದ ಹಣವೆಷ್ಟು? ಹಾಗೂ ಖರ್ಚಾಗಿರುವ ಹಣವೆಷ್ಟು?

ಇ) ಈ ಯೋಜನೆಯು ಯಾವಾಗ ಪೂರ್ಣಗೊಳ್ಳುತ್ತದೆ?

ಶ್ರೀ. ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಈ ಕೆಲಸವು ಈಗ ಪ್ರಗತಿಯಲ್ಲಿದ್ದು, ಯೋಜನೆಯನ್ನು 1995ನೇ ಮಾರ್ಚ್ ತಿಂಗಳ ಅಂತ್ಯದೊಳಗೆ ಚಾಲು ಮಾಡಲು ಉದ್ದೇಶಿಸಲಾಗಿದೆ.

ಆ) ಈ ಯೋಜನೆಗೆ ಮಂಜೂರಾದ ಹಣ ರೂ. 250.00 ಲಕ್ಷಗಳು, ಖರ್ಚಾದ ಹಣ ರೂ. 336.57 ಲಕ್ಷಗಳು

ಇ) ಈ ಯೋಜನೆಯನ್ನು ಮಾರ್ಚ್ 1995ರ ವೇಳೆಗೆ ಚಾಲು ಮಾಡಲು ಉದ್ದೇಶಿಸಲಾಗಿದೆ.

ಶ್ರೀ ಹಂಪನಗೌಡ : ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆ ಸಿಂಧನೂರು ಪಟ್ಟಣದ ಕುಡಿಯುವ ನೀರಿನ ಯೋಜನೆ ಬಗ್ಗೆ. ಈ ಯೋಜನೆಯಡಿಯಲ್ಲಿ ತೆಗೆದುಕೊಂಡಂತಹ